**ಪಿ. ಡಬ್ಲ್ಯೂ - 01**

**ದಿನಾಂಕ:17-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ-ಪ್ರತಿವಾದಿಗಳ ಪರ ಶ್ರೀ. ಟಿ. ಕೆ. ಹೆಚ್, ವಕೀಲರಿಂದ:-**

01. ವಾದಿಯು ನನ್ನ ತಾಯಿ ಮತ್ತು ಅವರು ಬದುಕಿದ್ದಾರೆ. ವಾದಿಯು ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ವಾದಿಗೆ ನಾನು ಒಬ್ಬನೇ ಮಗನಿರುತ್ತೇನೆ. ವಾದಿಯು ಆರೋಗ್ಯವಾಗಿದ್ದಾರೆ ಮತ್ತು ಅವರು ಆರಾಮಾಗಿ ಓಡಾಡುತ್ತಾರೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ವಾದಿಗೆ ಶುಗರ್, ಬಿ.ಪಿ ಮತ್ತು ಮಂಡಿ ನೋವು ಇದೆ ಮತ್ತು ನನ್ನ ತಂದೆಯು ಮೃತಪಟ್ಟ ನಂತರ ವಾದಿಗೆ ಉಸಿರಾಟದ ತೊಂದರೆ ಇದೆ. 2015 ನೇ ಇಸವಿಯಲ್ಲಿ ನನ್ನ ತಂದೆಯವರು ಮೃತಪಟ್ಟಿರುತ್ತಾರೆ. ಈ ದಾವೆಯನ್ನು ಸಲ್ಲಿಸಿದ ನಂತರ ವಾದಿಯು ಎಂದಿಗೂ ಸಹ ನ್ಯಾಯಾಲಯಕ್ಕೆ ಬಂದಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ವಾದಿಗೆ ಅನಾರೋಗ್ಯದ ಸಮಸ್ಯೆ ಇದೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ವೈದ್ಯಕೀಯ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

02. ನಿಪಿ-1 ನ್ನು ತಾವರೆಕೆರೆಯ ಉಪನೋಂದಾಣಾಧಿಕಾರಿಗಳ ಕಛೇರಿಯಲ್ಲಿ ಮಾಡಿಸಲಾಗಿದೆ. ನಿಪಿ-1 ನ್ನು ಮಾಗಡಿಯಲ್ಲಿ ಇರುವ ವಕೀಲರಾದ ಪಾಪಣ್ಣನವರ ಕಛೇರಿಯಲ್ಲಿ ಮಾಡಲಾಗಿರುತ್ತದೆ. ನಿಪಿ-1 ನ್ನು ಮಾಡಿದ ದಿನದಂದು ವಾದಿಯನ್ನು ಆಂಬುಲೆನ್ಸ್ ನಲ್ಲಿ ಕರೆದುಕೊಂಡು ಬಂದು ಅದಕ್ಕೆ ಸಹಿ ಹಾಕಲಾಗುತ್ತದೆ. ನಿಪಿ-1 ನ್ನು ಯಾವ ದಿನಾಂಕದಂದು ಮಾಡಲಾಗಿದೆ ಎಂದು ನನಗೆ ನೆನಪಿಲ್ಲ. ನಿಪಿ-1 ನ್ನು ಮಾಡುವ ಸಮಯದಲ್ಲಿ ಯಾವುದೇ ವೈದ್ಯಕೀಯ ದಾಖಲೆಯನ್ನು ನೀಡಿರುವುದಿಲ್ಲ. ನಿಪಿ-1 ನ್ನು ಮಾಡುವ ಸಮಯದಲ್ಲಿ ನಾನು ಮತ್ತು ವಾದಿ ಮಾತ್ರ ಇದ್ದೇವು. ನಿಪಿ-1 ಕ್ಕೆ ನಾನು ಮತ್ತು ಇಬ್ಬರು

ಸಾಕ್ಷಿದಾರರುಗಳು ಸಹಿಯನ್ನು ಹಾಕಿದ್ದಾರೆ. ಈಗ ಸಾಕ್ಷಿಗೆ ನಿಪಿ-1 ನ್ನು ತೋರಿಸಿದ್ದು, ಅದರಲ್ಲಿ ನಿಮ್ಮ ಸಹಿ ಇದೆಯಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ನಾನು ಸಹಿಯನ್ನು ಮಾಡಿರುವ ದಾಖಲೆ ನಿಪಿ-1 ಆಗಿರುವುದಿಲ್ಲ.

03. ನಿಪಿ-1 ನ್ನು ಮಾಡುವ ಸಮಯದಲ್ಲಿ ನನಗೆ ದಾವಾಸ್ವತ್ತಿನ ಬಗ್ಗೆ ಸಂಪೂರ್ಣವಾಗಿ ಮಾಹಿತಿ ಇತ್ತು. ನಿಪಿ-1 ನ್ನು ಮಾಡುವ ತನಕ ನಿಮಗೆ ದಾವಾಸ್ವತ್ತಿನ ಬಗ್ಗೆ ಯಾವುದೇ ಮಾಹಿತಿ ಇರಲಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಪಿ-1 ನ್ನು ಮಾಡಿದ ದಿನದಂದು ವಕೀಲರ ಕಛೇರಿಯಲ್ಲಿ ನೀವು ಸಹಿಯನ್ನು ಮಾಡಿರುತ್ತೀರಾ ಮತ್ತು ಅದನ್ನು ಹೊರತುಪಡಿಸಿ ಬೇರೆ ಎಲ್ಲೂ ಸಹ ಸಹಿಯನ್ನು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಪಿ-1 ನ್ನು ಮಾಡಿದ ದಿನಾಂಕದಂದು ವಾದಿಯನ್ನು ಗಿಡದ ಪಾಳ್ಯ ಗ್ರಾಮದಿಂದ ಮಾಗಡಿಗೆ ಆಂಬುಲೆನ್ಸ್ ನಲ್ಲಿ ಕರೆದುಕೊಂಡು ಬಂದೆವು ಮತ್ತು ಆ ದಿನಾಂಕದಂದು ಅವರು ಆಸ್ಪತ್ರೆಯಲ್ಲಿ ಇರಲಿಲ್ಲ. ತೀವ್ರ ನಿಗಾ ಘಟಕದಲ್ಲಿ ಇರುವ ರೋಗಿಗೆ ಮಾತ್ರ ಆಂಬುಲೆನ್ಸ್ ನ ಸೌಲಭ್ಯವನ್ನು ನೀಡಲಾಗುತ್ತದೆ ಎಂದರೆ ಸಾಕ್ಷಿಯು ಆ ದಿನಾಂಕದಂದು ವಾದಿಗೆ ತೀವ್ರ ಮಂಡಿನೋವು ಇದ್ದ ಕಾರಣ ಆಂಬುಲೆನ್ಸ್ ನಲ್ಲಿ ಬಂದಿದ್ದರು ಎನ್ನುತ್ತಾರೆ. ಆ ದಿನಾಂಕದಂದು ವಾದಿಗೆ ತೀವ್ರ ಮಂಡಿ ನೋವು ಇತ್ತು ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಹಾಜರಪಡಿಸಿರುವುದಿಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಕೋರಿದ್ದು, ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2 ನೇ ಅ. ಸಿ. ಜ. ಮತ್ತು ಜೆ.ಎಂ.ಎಫ್.ಸಿ,**
**ಮಾಗಡಿ**